# ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ವಿದ್ಯುತ್ ಸಮಸ್ಯೆಗಳ ಮತ್ತು ಗ್ರಾಹಕರ ಕುಂದು ಕೊರತೆಗಳನ್ನು ಕುರಿತು ಚರ್ಚಿಸಿ, ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ದಿನಾಂಕ: 16.11.2019 ರಂದು ಬೆಳಿಗ್ಗೆ 11:30ಗಂಟೆಗೆ ಶ್ರೀ ಎಮ್.ಎಸ್.ಪತ್ತಾರ್, ಕಾರ್ಯನಿರ್ವಾಹಕ ಅಭಿಯಂತರರು(ವಿ)., ಕಾರ್ಯ ಮತ್ತು ಪಾಲನಾ ವಿಭಾಗ, ಗು.ವಿ.ಸ.ಕಂ.ನಿ., ಕೊಪ್ಪಳ ರವರ ನೇತೃತ್ವದಲ್ಲಿ ಮುನಿರಾಬಾದ್ ಉಪ ವಿಭಾಗದಲ್ಲಿ ಏರ್ಪಡಿಸಲಾಗಿದ್ದ ಅದಾಲತ್ ಹಾಗೂ ಗ್ರಾಹಕರ ಸಂವಾದ ಸಭೆಯ ನಡವಳಿಗಳು.

**ಉಪಸ್ಥಿತರು: ಹಾಜರಿಯ ವಹಿಯಂತೆ:**

1 ಶ್ರೀ ಎಮ್.ಕಿರಣ್ ತಂ॥ ಪ್ರಭು ಸಾ॥ ಮುನಿರಾಬಾದ್
2 ಶ್ರೀ ಸರ್ಫರಾಜ್ ತಂ॥ ಶೇಕ್ಇಸ್ಮಾಯಿಲ್, ಸಾ॥ ಮುನಿರಾಬಾದ್
3 ಶ್ರೀ ವೀರಭದ್ರಪ್ಪ ತಂ॥ ಉಡಚಪ್ಪ ಹಾಲಹಳ್ಳಿ, ಸಾ॥ ಹುಲಿಗಿ
4 ಶ್ರೀ ಅಲಿಸಾಬ್, ಸಾ॥ ಗಬ್ಬೂರು
5 ಶ್ರೀ ಶ್ರೀನಿವಾಸ ತಂ॥ ತಿರುಪಯ್ಯ, ಸಾ॥ ಕೊಪ್ಪಳ
6 ಶ್ರೀ ಸಂತೋಷ, ಸಾ॥ ಕೊಪ್ಪಳ
7 ಶ್ರೀ ಬಸವರಾಜ, ಸಾ॥ ಹುಲಿಗಿ
8 ಶ್ರೀ ಇಕ್ರಾಮುದ್ದಿನ್ ತಂ॥ ಅಜೀಜುದ್ದೀನ್, ಸಾ॥ ಮುನಿರಾಬಾದ್
9 ಶ್ರೀ ನಾರಾಯಣ, ವಿದ್ಯುತ್ ಗುತ್ತಿಗೆದಾರರು,, ಸಾ॥ ಹುಲಿಗಿ
10 ಶ್ರೀ ವೀರಭದ್ರಪ್ಪ ಶೆಟ್ಟಿ, ಸಾ॥ ಮುನಿರಾಬಾದ್

**ಕಾರ್ಯ ಮತ್ತು ಪಾಲನಾ ಉಪ ವಿಭಾಗ, ಗು.ವಿ.ಸ.ಕಂ.ನಿ., ಮುನಿರಾಬಾದ್‌ನ ಅಧಿಕಾರಿ/ನೌಕರರು:**

1 ಶ್ರೀ ಎಮ್.ಎಸ್.ಪತ್ತಾರ್, ಕಾರ್ಯನಿರ್ವಾಹಕ ಅಭಿಯಂತರರು(ವಿ).
2 ಶ್ರೀ ಆರ್.ನಾಗರಾಜ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ).
3 ಶ್ರೀ ಶಿವಪ್ಪ.ವಿ.ಸೊಬರದ, ಸಹಾಯಕ ಅಭಿಯಂತರರು(ವಿ).
4 ಶ್ರೀ ಮೊಹಮ್ಮದ್ ರಫೀಕ್, ಹಿರಿಯ ಸಹಾಯಕ.
5 ಶ್ರೀ ಚಂದ್ರಶೇಖರ, ಸಹಾಯಕ
6 ಶ್ರೀ ಮನೋಹರ, ಮೆಕ್ಯಾನಿಕ್ ದರ್ಜೆ–2,
7 ಶ್ರೀ ಅಕ್ಷಯ, ಕಿರಿಯ ಸಹಾಯಕ.
8 ಶ್ರೀ ನಾಗರಾಜ ರಾಟಿ, ಸಹಾಯಕ.

ಶ್ರೀ ಆರ್.ನಾಗರಾಜ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)., ಕಾರ್ಯ ಮತ್ತು ಪಾಲನಾ ಉಪ ವಿಭಾಗ, ಗು.ವಿ.ಸ.ಕಂ.ನಿ., ಮುನಿರಾಬಾದ್ ರವರು ಸಭೆಯಲ್ಲಿ ಹಾಜರಾಗಿದ್ದ ಗ್ರಾಹಕರು ಹಾಗೂ ಅಧಿಕಾರಿ/ನೌಕರರನ್ನು ಸಭೆಗೆ ಸ್ವಾಗತಿಸಿದರು. ವಿದ್ಯುತ್‌ಗೆ ಸಂಬಂಧಿತ ಸಮಸ್ಯೆಗಳ ಮತ್ತು ಗ್ರಾಹಕರ ಕುಂದು ಕೊರತೆಗಳನ್ನು ಕುರಿತು ಚರ್ಚಿಸಿ, ಸದರಿ ಸಭೆಯಲ್ಲಿ ಗ್ರಾಹಕರು ವಿದ್ಯುತ್‌ಗೆ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ತಿಳಿಸುತ್ತಾ, ಸಭೆಯ ಉದ್ದೇಶದ ಕುರಿತಾಗಿ ಸಭೆಯಲ್ಲಿ ವಿವರಿಸುತ್ತಾ, ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮುಂದುವರೆದು, ದಿನಾಂಕ: 19.10.2019 ರಂದು ಏರ್ಪಡಿಸಲಾಗಿದ್ದ ಅದಾಲತ್ ಹಾಗೂ ಗ್ರಾಹಕರ ಸಂವಾದ ಸಭೆಯಲ್ಲಿ ಚರ್ಚಿಸಲಾದ ವಿಷಯಗಳನ್ನು ವಿವರಿಸಿ, ಅದರಲ್ಲಿ ಪರಿಹರಿಸಿದ ಅಂಶಗಳನ್ನು ಕುರಿತು ತಿಳಿಸಿದರು.

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:**

1. ಮುನಿರಾಬಾದ್ ಕ್ಯಾಂಪ್‌ನ ಎಸ್.ಬಿ.ಐ ಬ್ಯಾಂಕಿನ ಹತ್ತಿರ ಇರುವ ಗಿರಣಿ ಹತ್ತಿರ ಇರುವ ಕಬ್ಬಿಣದ ಕಂಬ ಬಾಗಿರುತ್ತದೆ. ಆದ್ದರಿಂದ ಸದರಿ ಕಂಬದ ನಿರ್ವಹಣಾ ಕಾರ್ಯ ಕೈಗೊಂಡು ಅವುಗಳನ್ನು ಸರಿಪಡಿಸಿಕೊಡುವಂತೆ ಸಭೆಯಲ್ಲಿ ಹಾಜರಿದ್ದ ಗ್ರಾಮಸ್ಥರು ಮನವಿ ಸಲ್ಲಿಸಿದರು.
   (ಕ್ರಮ: ಶಾಖಾಧಿಕಾರಿ, ಶಾಖೆ–1)



Scanned by CamScanner

2. ಮುನಿರಾಬಾದ್ ಕ್ಯಾಂಪ್‌ನ ಶಿಕ್ಷಕರ ಕಾಲೋನಿಯಲ್ಲಿರುವ ಕಬ್ಬಿಣದ ಕಂಬವನ್ನು ಬದಲಿಸಿ ಕೊಡಬೇಕೆಂದು ಗ್ರಾಮಸ್ಥರು ಮನವಿ ಸಲ್ಲಿಸಿದರು.
(ಕ್ರಮ: ಶಾಖಾಧಿಕಾರಿಗಳು)

3. ಮುನಿರಾಬಾದ್ ಕ್ಯಾಂಪ್‌ನ ಅಂಬೇಡ್ಕರ್ ಕಾಲೋನಿಯ ಅಂಗನವಾಡಿ ಬಳಿ ಇರುವ ಕಬ್ಬಿಣದ ಕಂಬವನ್ನು ಬದಲಿಸಿ ಕೊಡಬೇಕೆಂದು ಗ್ರಾಮಸ್ಥರು ಮನವಿ ಸಲ್ಲಿಸಿದರು.
(ಕ್ರಮ: ಶಾಖಾಧಿಕಾರಿಗಳು)

4. ಹೊಸ ಮೀಟರ್‌ಗಳನ್ನು ಹಾಕಿರುವ ಕಾರಣ ವಿದ್ಯುತ್ ಬಿಲ್ಲುಗಳು ಜಾಸ್ತಿ ಬರುತ್ತೀವೆ ಎಂದು ಸಭೆಯಲ್ಲಿ ಹಾಜರಿದ್ದ ಗ್ರಾಹಕರು ತಿಳಿಸಿರುತ್ತಾರೆ.
(ಕ್ರಮ: ಶಾಖಾಧಿಕಾರಿಗಳು)

ಮೇಲ್ಕಾಣಿಸಿದ ಎಲ್ಲಾ ಅಂಶಗಳನ್ನು ಕುರಿತು ಚರ್ಚಿಸಿದ ನಂತರ ಶ್ರೀ ಎಮ್.ಎಸ್.ಪತ್ತಾರ್, ಕಾರ್ಯನಿರ್ವಾಹಕ ಅಭಿಯಂತರರು(ವಿ)., ಕಾರ್ಯ ಮತ್ತು ಪಾಲನಾ ವಿಭಾಗ, ಗು.ವಿ.ಸ.ಕಂ.ನಿ., ಕೊಪ್ಪಳ ರವರು ಸಭೆಯಲ್ಲಿ ಗ್ರಾಹಕರು ಸಲ್ಲಿಸಿರುವ ಮನವಿಗಳನ್ನು/ಸಮಸ್ಯೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದರು. ಸಭೆಯಲ್ಲಿ ಹಾಜರಿದ್ದ ಎಲ್ಲರ ಒಮ್ಮತದೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ).,**
**ಕಾ. ಮತ್ತು ಪಾ. ಉಪ ವಿಭಾಗ, ಗು.ವಿ.ಸ.ಕಂ.ನಿ.,**
**ಮುನಿರಾಬಾದ್.**

**ಸಂ.: ಸಕಾನಿಅ(ವಿ)/ಸಅ(ತಾಂ.)/ಮು'ಬಾದ್/2019-20**/2604-06 **ದಿನಾಂಕ:** 7.12.19

<u>ಪ್ರತಿಗಳನ್ನು ಈ ಕೆಳಕಂಡ ಮೇಲಾಧಿಕಾರಿಗಳ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.</u>

1. ಮಾನ್ಯ ಮುಖ್ಯ ಅಭಿಯಂತರರು(ವಿ), ಕಾ.ಮತ್ತು ಪಾ. ವಲಯ, ಗು.ವಿ.ಸ.ಕಂ.ನಿ., ಬಳ್ಳಾರಿ.
2. ಮಾನ್ಯ ಅಧೀಕ್ಷಕ ಅಭಿಯಂತರರು(ವಿ), ಕಾ.ಮತ್ತು ಪಾ. ವೃತ್ತ ಕಛೇರಿ, ಗು.ವಿ.ಸ.ಕಂ.ನಿ., ಕೊಪ್ಪಳ ಕಾರ್ಯಸ್ಥಾನ: ಮುನಿರಾಬಾದ್.
3. ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು(ವಿ),ಕಾ.ಮತ್ತು ಪಾ. ವಿಭಾಗ, ಗು.ವಿ.ಸ.ಕಂ.ನಿ., ಕೊಪ್ಪಳ.
4. ಪ್ರತಿಯನ್ನು ಕಡತಕ್ಕೆ.

Scanned by CamScanner